ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಶಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE : 18/12/20

# 3 ಕೃಷಿ ಕಾಯ್ದೆ ಜಾರಿ ಸದ್ಯಕ್ಕೆ ತಡೆಯಿರಿ: ಸುಪ್ರೀಂ ಸಲಹೆ

## ಕೃಷಿ ತಜ್ಞರು, ರೈತ ಪ್ರತಿನಿಧಿಗಳ ಸ್ವತಂತ್ರ ಸಮಿತಿ ರಚಿಸುವ ಚಿಂತನೆ ಇದೆ

## ರೈತರಿಗೆ ಪ್ರತಿಭಟಿಸುವ ಹಕ್ಕಿದೆ, ಆದರೆ ಇತರರಿಗೆ ತೊಂದರೆಯಾಗಬಾರದು

ನವದೆಹಲಿ: ಕೇಂದ್ರ ಸರ್ಕಾರದ 3 ಕೃಷಿ ಕಾಯ್ದೆಗಳನ್ನು ವಿರೋಧಿಸಿ ದೆಹಲಿಯ ಹೊರವಲಯದಲ್ಲಿ ರೈತರು 22 ದಿನಗಳಿಂದ ನಡೆಸುತ್ತಿರುವ ಪ್ರತಿಭಟನೆಯ ಬಗ್ಗೆ ಸುಪ್ರೀಂ ಕೋರ್ಟ್ ತೀವ್ರ ಕಳವಳ ವ್ಯಕ್ತಪಡಿಸಿದ್ದು, ಬಿಕ್ಕಟ್ಟು ಬಗೆಹರಿಸಲು ಕೃಷಿ ತಜ್ಞರು ಹಾಗೂ ರೈತ ಸಂಘಟನೆಗಳ ಪ್ರತಿನಿಧಿಗಳನ್ನೊಳಗೊಂಡ 'ನಿಷ್ಪಕ್ಷ ಹಾಗೂ ಸ್ವತಂತ್ರ' ಸಮಿತಿ ರಚಿಸಲು ಚಿಂತನೆ ನಡೆಸುತ್ತಿರುವುದಾಗಿ ಹೇಳಿದೆ. ಅಲ್ಲದೆ, ಸದ್ಯಕ್ಕೆ ಈ ಕೃಷಿ ಕಾಯ್ದೆಗಳ ಜಾರಿಯನ್ನು ತಡೆಹಿಡಿಯಿರಿ ಎಂದೂ ಕೇಂದ್ರ ಸರ್ಕಾರಕ್ಕೆ ಸಲಹೆ ನೀಡಿದೆ.



↘ 14

**ಇಂದು ರೈತರನ್ನುದ್ದೇಶಿಸಿ ಮೋದಿ ಭಾಷಣ** ↘ 13

## ದಿಲ್ಲಿ ಅಸೆಂಬ್ಲಿಯಲ್ಲಿ ಕೃಷಿ ಮಸೂದೆ ಹರಿದ ಕೇಜ್ರಿ

ನವದೆಹಲಿ: ಕೃಷಿ ಕಾಯ್ದೆಗಳನ್ನು ವಿರೋಧಿಸಿ ರಾಜಧಾನಿಯಲ್ಲಿ ರೈತರು ಪ್ರತಿಭಟನೆ ನಡೆಸುತ್ತಿರುವಾಗಲೇ, ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ವಿಧಾನಸಭೆಯಲ್ಲಿ ಕೃಷಿ ಮಸೂದೆಯ ಪ್ರತಿಗಳನ್ನು ಹರಿದು ಹಾಕಿದ್ದಾರೆ. ಇದೇ ವೇಳೆ ಕೇಂದ್ರದ 3 ಕೃಷಿ ಕಾಯ್ದೆಗಳ ವಿರುದ್ಧ ದೆಹಲಿ ವಿಧಾನಸಭೆ ಗುರುವಾರ ನಿರ್ಣಯ ಅಂಗೀಕರಿಸಿದೆ.



ವಿಧಾನಸಭೆ ಅಧಿವೇಶನದಲ್ಲಿ ಮಾತನಾಡಿದ ಕೇಜ್ರಿವಾಲ್, ಬಿಜೆಪಿಯ ಚುನಾವಣಾ ನಿಧಿಗೋಸ್ಕರ ಈ ಕಾಯ್ದೆಗಳನ್ನು ರೂಪಿಸಲಾಗಿದೆಯೇ ಹೊರತು ರೈತರಿಗಾಗಿ ಅಲ್ಲ. ಈ ಕೆಲಸ ಮಾಡಲು (ಕಾಯ್ದೆ ಪ್ರತಿ ಹರಿಯುವುದು) ನೋವಾಗುತ್ತಿದೆ. ಆದರೆ 2 ಡಿಗ್ರಿ ಚಳಿ ಇದ್ದರೂ ದೆಹಲಿಯ ರಸ್ತೆಗಳ ಮೇಲೆ ಮಲಗಿರುವ ನನ್ನ ದೇಶದ ರೈತರಿಗೆ ವಂಚನೆ ಮಾಡಲು ನನ್ನಿಂದ ಆಗುತ್ತಿಲ್ಲ ಎಂದು ಕೃಷಿ ಕಾಯ್ದೆಗಳನ್ನು ಹರಿದುಹಾಕಿದರು.

ನಾನು ಮೊದಲು ಈ ದೇಶದ ನಾಗರಿಕ. ಆನಂತರ ಮುಖ್ಯಮಂತ್ರಿ. ದೆಹಲಿಯಲ್ಲಿ ಪ್ರತಿಭಟನೆ ನಡೆಸುತ್ತಿರುವ ರೈತರ ಪೈಕಿ ಈವರೆಗೆ 20 ಮಂದಿ ಸಾವಿಗೀಡಾಗಿದ್ದಾರೆ. ಕೇಂದ್ರ ಸರ್ಕಾರ ಯಾವಾಗ ಎಚ್ಚೆತ್ತುಕೊಳ್ಳಲಿದೆ ಎಂದು ಪ್ರಶ್ನಿಸಿದರು.

24

# 3 ಕೃಷಿ ಕಾಯ್ದೆ ಜಾರಿ ಸದ್ಯಕ್ಕೆ ತಡೆಯಿರಿ: ಸುಪ್ರೀಂ ಸಲಹೆ

↙ 2ನೇ ಪುಟದಿಂದ ಕ.ಪ್ರ. 18/12/20

ರೈತರ ಪ್ರತಿಭಟನೆಯಿಂದ ಸಂಚಾರಕ್ಕೆ ಸಮಸ್ಯೆಯಾಗುತ್ತಿದೆ ಹಾಗೂ ಕೊರೋನಾ ಹರಡುವ ಭೀತಿ ಹೆಚ್ಚಿದೆ ಎಂದು ಆಕ್ಷೇಪಿಸಿ ಸಲ್ಲಿಕೆಯಾಗಿರುವ ಹಲವಾರು ಅರ್ಜಿಗಳ ವಿಚಾರಣೆ ನಡೆಸುತ್ತಿರುವ ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಎಸ್.ಎ.ಬೋಬ್ಡೆ ಅವರ ಪೀಠ, ರೈತರ ಸ್ಥಿತಿ ಹಾಗೂ ಇತ್ತೀಚಿನ ಬೆಳವಣಿಗೆಗಳ ಬಗ್ಗೆ ಗುರುವಾರ ತೀವ್ರ ಆತಂಕ ವ್ಯಕ್ತಪಡಿಸಿತು. 'ಪ್ರತಿಭಟಿಸಲು ರೈತರಿಗೆ ಹಕ್ಕಿದೆ. ಆದರೆ, ಪ್ರತಿಭಟಿಸಲು ಅವರಿಗಿರುವ ಹಕ್ಕಿನಿಂದ ಮುಕ್ತವಾಗಿ ಸಂಚರಿಸಲು ಹಾಗೂ ಅಗತ್ಯ ವಸ್ತುಗಳನ್ನು ಪಡೆಯಲು ಇತರರಿಗೆ ಇರುವ ಹಕ್ಕಿನ ಉಲ್ಲಂಘನೆಯಾಗಬಾರದು. ಪ್ರತಿಭಟನೆಯೆಂದರೆ ಇಡೀ ನಗರವನ್ನು ಬಂದ್ ಮಾಡುವುದಲ್ಲ. ರೈತರ ಸ್ಥಿತಿ ನೋಡಿ ನಾವು ಆತಂಕಗೊಂಡಿದ್ದೇವೆ. ನಾವೂ ಭಾರತೀಯರೇ. ಆದರೆ, ಇತ್ತೀಚಿನ ಬೆಳವಣಿಗೆಗಳನ್ನು ನೋಡಿ ಭೀತಿಯಾಗುತ್ತಿದೆ. ಪ್ರತಿಭಟಿಸುವ ರೈತರು ಕೇವಲ ಗುಂಪಲ್ಲ (ಮಾಬ್)' ಎಂದೂ ಹೇಳಿತು.

**ರೈತರು ಅಷ್ಟು ದೊಡ್ಡ ಸಂಖ್ಯೆಯಲ್ಲಿ ನಗರಕ್ಕೆ ಪ್ರವೇಶಿಸಲು ಅವಕಾಶ ನೀಡಿದರೆ ಅವರು ಹಿಂಸಾಚಾರ ನಡೆಸುವುದಿಲ್ಲ ಎಂಬುದಕ್ಕೆ ಏನು ಗ್ಯಾರಂಟಿ? ಅಂತಹ ಗ್ಯಾರಂಟಿ ಕೋರ್ಟ್‌ಗಂತೂ ಇಲ್ಲ. ಹಿಂಸಾಚಾರ ಏರ್ಪಟ್ಟರೆ ತಡೆಯುವ ಶಕ್ತಿಯೂ ಕೋರ್ಟ್‌ಗಿಲ್ಲ. ಆ ಕೆಲಸವನ್ನು ಪೊಲೀಸರು ಮತ್ತು ಅಧಿಕಾರಿಗಳೇ ಮಾಡಬೇಕು. ಪ್ರತಿಭಟಿಸುವ ಹಕ್ಕು ಅಂದರೆ ಇಡೀ ನಗರವನ್ನು ಬಂದ್ ಮಾಡುವ ಹಕ್ಕು ಅಲ್ಲ.**

**• ಸುಪ್ರೀಂ ಕೋರ್ಟ್**

ಕೇಂದ್ರ ಸರ್ಕಾರ ನಡೆಸುತ್ತಿರುವ ಮಾತುಕತೆಯಿಂದ ಯಾವುದೇ ಪ್ರಯೋಜನವಾಗದಿರುವುದನ್ನು ಮನಗಂಡ ನ್ಯಾಯಪೀಠ, ಪ್ರತಿಭಟನೆ ನಡೆಸುತ್ತಿರುವ ರೈತರೂ ಸೇರಿದಂತೆ ಸಂಬಂಧಪಟ್ಟ ಎಲ್ಲರ ಅಭಿಪ್ರಾಯ ಪಡೆದು ತಜ್ಞರ ಸಮಿತಿ ರಚಿಸುತ್ತೇವೆ. ಅದಕ್ಕೂ ಮುನ್ನ ತಮ್ಮ ಅಹವಾಲು ಹೇಳಿಕೊಳ್ಳುವಂತೆ ಪ್ರತಿಭಟನಾನಿರತ ರೈತರಿಗೆ ನೋಟಿಸ್ ನೀಡುತ್ತೇವೆ. ಹೀಗಾಗಿ ಸದ್ಯಕ್ಕೆ ಕಾಯ್ದೆಗಳ ಜಾರಿಯನ್ನು ತಡೆಹಿಡಿಯಿರಿ ಎಂದು ಕೇಂದ್ರ ಸರ್ಕಾರಕ್ಕೆ ಸಲಹೆ ನೀಡಿತು. ಈ ಪ್ರಸ್ತಾಪವನ್ನು ವಿರೋಧಿಸಿದ ಅಟಾರ್ನಿ ಜನರಲ್ ಕೆ.ಕೆ.ವೇಣು ಗೋಪಾಲ್, ಕಾಯ್ದೆ ಜಾರಿ ತಡೆಹಿಡಿದರೆ ರೈತರು ಮಾತುಕತೆಗೆ ಬರುವುದಿಲ್ಲ ಎಂದರು. ಆಗ ಸುಪ್ರೀಂ ಕೋರ್ಟ್, 'ನಾವು ಕಾಯ್ದೆಗಳ ಜಾರಿ ನಿಲ್ಲಿಸಲು ಹೇಳುತ್ತಿಲ್ಲ, ಸದ್ಯಕ್ಕೆ ಜಾರಿಗೊಳಿಸುವುದನ್ನು ತಡೆಹಿಡಿಯಿರಿ'. ಪ್ರತಿಭಟನೆ ಮತ್ತು ಮುಕ್ತವಾಗಿ ಓಡಾಡುವುದಕ್ಕೆ ಜನರಿಗಿರುವ ಹಕ್ಕು ಇವುಗಳ ಬಗ್ಗೆ ಮಾತ್ರ ನಿರ್ಧರಿಸುತ್ತೇವೆ ಎಂದು ಕೋರ್ಟ್ ತಿಳಿಸಿತು.